**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 215/2024**

**ಪ್ರಾಸಾಃ- 13 ಚಾಸಾಃ- 11**

| | | |
|---|---|---|
| ಸಾಕ್ಷಿಯ ಹೆಸರು | : | ಎಲ್.ಎಸ್ . ಪಾಟೀಲ್ |
| ತಂದೆಯ ಹೆಸರು | : | ಎಲ್.ಸಣ್ಣ ಸೇವಾ ನಾಯಕ್ |
| ವಯಸ್ಸು | : | 46 ವರ್ಷ |
| ವೃತ್ತಿ | : | ಬ್ರಾಂಚ್ ಮ್ಯಾನೇಜರ್, ಎಸ್ ಬಿ ಐ, ಜಿ ಬಿಬಿ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 6.3.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ಜೂನ್ 2024 ರಿಂದ ಇಲ್ಲಿಯವರೆಗೂ ಜಿ ಬಿ ಬಿ ಬ್ರಾಂಚ್ ಬಳ್ಳಾರಿಯಲ್ಲಿ, ಬ್ರಾಂಚ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಬ್ರಾಂಚ್ ಶಾಖೆ ನಂಬರ್ ಮೊದಲು 40115 ಆಗಿತ್ತು. ಈಗ ಅದು 40683 ಆಗಿದೆ. ಈ ಪ್ರಕರಣದಲ್ಲಿ ಡಿ ವೈ ಎಸ್ ಪಿ ಡಿ ಸಿ ಆರ್ ಇ, ದಾವಣಗೆರೆ ರವರು ಖಾತೆ ಸಂಖ್ಯೆಃ 60489370325 ರ ಚೆಕ್ ಜಮಾ ಸ್ಟೇಟ್‌ಮೆಂಟ್ ನ್ನು ಕೇಳಿದ್ದರು. ಅದರಂತೆ ನಮ್ಮ ಬ್ರಾಂಚಿನಿಂದ ಸದರಿಯವರಿಗೆ ಸಂಬಂಧಪಟ್ಟ ದಿಃ 1-1-2015 ರಿಂದ 31-1-2015 ರವರೆಗಿನ ಸ್ಟೇಟ್‌ಮೆಂಟ್ ಆಫ್ ಅಕೌಂಟ್ ನ್ನು ನೀಡಿದ್ದೆವು. ಸದರಿ ಸ್ಟೇಟ್‌ಮೆಂಟ್‌ನಲ್ಲಿ ದಿಃ 7-1-2015 ರಂದು ಸದರಿ ಖಾತೆಯಿಂದ ನೀಡಿದ ಚೆಕ್ ನಂಃ 104248 ಮೂಲಕ ರೂ. 60,000 ಹಣ ಗೀತಾ ಎಂಬುವವರ ಹೆಸರಿಗೆ ಜಮಾ ಆಗಿದ್ದು ಕಂಡು ಬಂದಿತ್ತು. ಸಾಕ್ಷಿ ಗುರುತಿಸಿದ ಮನವಿ ಪತ್ರ ಮತ್ತು ಅಕೌಂಟ್ ಸ್ಟೇಟ್‌ಮೆಂಟ್ ನ್ನು ನಿಪಿ-44 ಮತ್ತು 45 ಎಂದು ಕ್ರಮವಾಗಿ ಗುರುತಿಸಲಾಯಿತು. ನಿಪಿ-44 ಪತ್ರದಲ್ಲಿ ದಿಃ 26-12-2014 ರ ಸ್ಟೇಟ್ ಮೆಂಟ್ ಸಹ ಕೇಳಿದ್ದರು. ಆದರೆ ನಿಪಿ-45 ರಂತೆ ಮಾತ್ರ ರಿಕಾರ್ಡ್ ಇದ್ದುದರಿಂದ ಅದನ್ನು ಮಾತ್ರ ನೀಡಿದ್ದೆವು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ವಿ ವಕೀಲರಿಂದಃ</u>**

ನನಗೆ ಪ್ರಕರಣದ ಬಗ್ಗೆ ಪ್ರತ್ಯಕ್ಷವಾದ ಮಾಹಿತಿ ಇಲ್ಲ. ನಿಪಿ-44 ರಲ್ಲಿ ದಿಃ 7-1-2015 ರ ಅಕೌಂಟ್ ಸ್ಟೇಟ್‌ಮೆಂಟ್ ಕೇಳಿಲ್ಲ ಎಂದರೆ ಸರಿ. ಸರಕಾರದ ಅನುದಾನದ ಮೊತ್ತ ಯಾರ ಯಾರ ಖಾತೆಗೆ ಜಮಾ ಆಗುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಈ ಪ್ರಕರಣದಲ್ಲಿ ಗೀತಾ ಎಂಬುವವರ ಹೆಸರಿಗೆ ಚೆಕ್ ಕೊಟ್ಟಿರುವುದರಿಂದ ಅದು ಗೀತಾ  ಅವರ ಹೆಸರಿಗೆ ಜಮಾ ಆಗಿದೆ ಎಂದು ಹೇಳಿರುತ್ತಾರೆ. ಎಲ್ಲಾ ಚೆಕ್‌ಗಳನ್ನು ಅಕೌಂಟ್ ಮೂಲಕ ಟ್ರಾನ್ಸ್ ಫರ್ ಮಾಡುತ್ತೇವೆ ಎಂದರೆ ಸರಿ. ನಿಪಿ-45 ರಲ್ಲಿ ಗೀತಾಳ ಅಕೌಂಟ್ ನಂಬರ್  ಮತ್ತು ಅವಳ ಗಂಡನ ಹೆಸರು ನಮೂದು ಇಲ್ಲ ಎಂದರೆ ಸರಿ. 2015 ರಲ್ಲಿ ಆನ್ ಲೈನ್ ವ್ಯವಹಾರ ನಡೆಯುತ್ತಿತ್ತು ಎಂದರೆ ಸರಿ. ಸರಕಾರದ ಎಲ್ಲಾ ಚೆಕ್ಕುಗಳನ್ನು ಕ್ರಾಸ್ ಮಾಡಿ ಕೊಡುತ್ತಿದ್ದರು ಎಂದರೆ ಸರಿ. ಕ್ರಾಸ್ ಮಾಡಿ ಚೆಕ್ ನೀಡಿದ್ದಲ್ಲಿ ನೇರವಾಗಿ ವ್ಯಕ್ತಿಗೆ ಹಣ ಕೊಡಲು ಬರುವುದಿಲ್ಲ ಎಂದರೆ ಸರಿ. ದಿಃ 7-1-2015 ರಂದು ಯಾವುದೇ ವ್ಯವಹಾರ ಆಗಿಲ್ಲದೇ ಇದ್ದರೂ ಸಹ ನಾನು ನಿಪಿ-45 ರಲ್ಲಿ ಸದರಿ ದಿನಾಂಕ ಸೇರಿಸಿ ಸುಳ್ಳು ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ನಿಪಿ-45 ಸಿಸ್ಟಮ್ ಜನರೇಟ್ ಆಗಿರುವುದರಿಂದ ಅದರಲ್ಲಿ ಏನನ್ನೂ ಸೇರಿಸಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ನಿಪಿ-45 ರಲ್ಲಿ ನಮೂದು ಮಾಡಿರುವ ಗೀತಾಳಿಗೂ ಮತ್ತು ಈ ಪ್ರಕರಣದ ಆರೋಪಿಯಾದ ಗೀತಾಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಅನುಕೂಲವಾಗುವ ರೀತಿಯಲ್ಲಿ ಸ್ಟೇಟ್‌ಮೆಂಟ್ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ: 215/2024**

**ಪ್ರಾಸಾಃ 14 ಚಾಸಾಃ 17**

| | | |
|---|---|---|
| ಸಾಕ್ಷಿಯ ಹೆಸರು | : | ಸವಿತಾ.ಜಿ.ಸಿ |
| ಗಂಡನ ಹೆಸರು | : | ಶಿವಕುಮಾರ್ |
| ವಯಸ್ಸು | : | 46 ವರ್ಷ |
| ವೃತ್ತಿ | : | ಮಹಿಳಾ ಪೇದೆ 248, ಹದಡಿ ಪೋಲೀಸ್ ಠಾಣೆ |
| ವಾಸಸ್ಥಳ | : | ದಾವಣಗೆರೆ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 6.3.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ದಿಃ 27-1-2016 ರಿಂದ 28-8-2023 ರವರೆಗೆ ನಾನು ಡಿ ಸಿ ಆರ್ ಇ, ದಾವಣಗೆರೆ ಪೋಲೀಸ್ ಠಾಣೆಯಲ್ಲಿ ಮಹಿಳಾ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 7-7-2022 ರಂದು ಚಾಸಾ 18 ರವರು ನಿಪಿ-9 ರಂತೆ ಪಂಚನಾಮೆ ಮಾಡುವ ಸಮಯದಲ್ಲಿ ನಾನು ಹಾಜರು ಇದ್ದು ಸದರಿ ಪಂಚನಾಮೆಯ ಪ್ರಕ್ರಿಯಾ ಪೋಟೋಗಳನ್ನು ತೆಗೆದಿದ್ದೆ. ಸಾಕ್ಷಿಯು ನಿಪಿ-10 ಮತ್ತು 11 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಪಂಚನಾಮೆ ಸಮಯದಲ್ಲಿ ತೆಗೆದಿರುವುದಾಗಿ ಹೇಳಿರುತ್ತಾರೆ. ಸದರಿ ಪೋಟೋಗಳನ್ನು ನನ್ನ ಆಂಡ್ರಾಯ್ಡ್ ಮೊಬೈಲ್‌ನಿಂದ ತೆಗೆದು ಅದನ್ನು ಕಂಪ್ಯೂಟರ್ ಗೆ ಅಳವಡಿಸಿ ನಂತರ ಅದನ್ನು ಸಿಡಿ ಗೆ ಕಾಪಿ ಮಾಡಿ ತನಿಖಾಧಿಕಾರಿಗಳಿಗೆ ನೀಡಿದ್ದೆ. ಸಾಕ್ಷಿಯು ಗುರುತಿಸಿದ ಸಿಡಿಯನ್ನು ನಿಪಿ-46 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ

ಪತ್ರವನ್ನು ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ಪ್ರಮಾಣ ಪತ್ರವನ್ನುನಿಪಿ-47 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-47(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ವಿ ವಕೀಲರಿಂದಃ**

ನಾನು ಪಂಚನಾಮೆಯಲ್ಲಿ ಸಹಿ ಮಾಡಿಲ್ಲ. ನಿಪಿ-10 ಮತ್ತು 11 ಪೋಟೋಗಳಲ್ಲಿ ದಿನಾಂಕ, ಸ್ಥಳ ಮತ್ತು ಸಮಯ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿಗೆ ನಿಪಿ-10 ಮತ್ತು 11 ಪೋಟೋಗಳಲ್ಲಿ ತಾಲ್ಲೂಕು ಕಚೇರಿ ಎಂದು ನಮೂದು ಇಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆರೋಪಿ ತೋರಿಸಿದ ಸ್ಥಳದಲ್ಲಿ ಪೋಟೋ ತೆಗೆದಿದ್ದಾಗಿ ಹೇಳಿರುತ್ತಾರೆ. ಸದರಿ ಪೋಟೋಗಳನ್ನು ನಾನು ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ನಾನು ಪೋಟೋಗಳನ್ನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-46 ಸಿಡಿಯಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ದಿಃ 7—7-2022 ರಂದು ನಾನು ಪಂಚನಾಮೆ ಸಮಯದಲ್ಲಿ ಹಾಜರು ಇದ್ದೆ ಎಂದು ಮತ್ತು ಪೋಟೋಗಳನ್ನು ತೆಗೆದಿದ್ದೆ ಎಂದು ಮತ್ತು ಅವುಗಳನ್ನು ಸಿಡಿ ಗೆ ಕಾಪಿ ಮಾಡಿ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ನಿಪಿ-47 ರಂತೆ ಸುಳ್ಳು ಪ್ರಮಣ ಪತ್ರ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ನಾನು ಇದ್ದ ಬಗ್ಗೆ ಮತ್ತು ಪೋಟೋ ತೆಗೆದ ಬಗ್ಗೆ ನಮೂದು ಇಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ಈ ಸಾಕ್ಷ್ಯವನ್ನು ವಿ.ಸಿ ಮೂಲಕ ರೆಕಾರ್ಡಿಂಗ್ ಮಾಡಲಾಗಿದ್ದು ಸಾಕ್ಷಿದಾರರು ಹೇಳಿದಂತೆ ಯತಾವತ್ತಾಗಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು. ಶ್ರೀ ಸಿದ್ದೇಶ್, ಎ ಪಿ ಸಿ -37 ಟೆಕ್ನಿಷಿಯನ್ ಆಗಿ ಸಾಕ್ಷಿಯ ಪಾಯಿಂಟ್‌ನಲ್ಲಿದ್ದು ಶ್ರೀಮತಿ ನಾಗಶ್ರೀ ರವರು ಟೆಕ್ನಿಷಿಯನ್ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ).

**ಓ.ಹೇ.ಕೆ. ಸರಿ ಇದೆ.**

ಅಪರ ಜಿಲ್ಲಾ ಮತ್ತು  ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.